

ಸುಬ್ಬುಲು ಅವನ ಕೈಲಿದ್ದ ಕೋಲನ್ನು ಕಿತ್ತುಕೊಂಡು ದನಮಂದೆಯನ್ನು ಚದುರಿಸತೊಡಗಿದಳು. ಲಾಟಿನ ಯಜಮಾನ ಕಕ್ಕಾವಿಕ್ಕಿಯಾದ. ಏಯ್ ಏಯ್ ಎಂದು ಅಬ್ಬರಿಸಿದ. ವೆಂಕಟಸಾಮಿಯೇ ಮುಂದಾಳೆಂದು ತಿಳಿದು ಕೈಮುಗಿದು ನಿಂತು, ನಿಮ್ಮದನ್ನ ತಕೊಂಡೋಗಿ ಅಂದ. ಇನ್ನೂ ಇಂಥ ಎಷ್ಟು ಕಳ್ಳಮಾಲಿದೆ ಮಂದೇಲಿ ಎಂದು ಕೇಳಿದ ವೆಂಕಟಸಾಮಿ. ಅಷ್ಟರಲ್ಲಿ ನಾಲ್ಕಾರು ಜನ ತಮ್ಮ ದನಗಳನ್ನು ಹುಡುಕಿಕೊಂಡು ಅಲ್ಲಿಗೆ ಬಂದರು. ನಾಲ್ಕು ಹಲ್ಲಿನ ಒಂದು ಜೊತೆ ಎತ್ತು, ಒಂದು ಪಡ್ಡೆ, ಎರಡು ಕರುಗಳನ್ನು ಬಿಟ್ಟು ಕೊಡುತ್ತ, 'ಸ್ವಂತದೋವು ಎಂದು ಮೋಸ ಮಾಡಿದ್ರು ಕಳ್ ನನ್ ಮಕ್ಳು' ಎಂದು ಬೈಯುತ್ತ ನಿಂತ.

* * *

ಕಾಲ ಯಾವ ದೊಣೆನಾಯಕನ ಅಪ್ಪಣೆಗೂ ಸಿಕ್ಕದು.

ಸೇಕರಿ ಬರಲಿಲ್ಲ. ಏನಾದನೆಂಬ ಆತಂಕ ಚಿನ್ನಪಾಪಲುಳಲ್ಲಿ ಇರಲಿಲ್ಲ. ಬರಲೆಂಬ ನಿರೀಕ್ಷೆ ಅವಳಲ್ಲಿ ಇಣುಕಿಯೂ ನೋಡಲಿಲ್ಲ. ರತ್ನಾಲುವಿಗೆ ಅವನೊಂದು ಕೆಟ್ಟ ನೆನಪು. ಊರಿನಲ್ಲಿ ಅವನು, ಅವನಂಥವರಿಗೆ ಬುದ್ಧಿ ಹೇಳಲೊಂದು ಉದಾಹರಣೆಯಾಗುಳಿದ.

ಗಂಡನಿಲ್ಲದ್ದೊಂದು ಕೊರತೆ ಅಂದುಕೊಳ್ಳದೆ ಚಿನ್ನಪಾಪಲು, ತಂದೆ ಮೇಯಿಸುತ್ತಿದ್ದ ತನ್ನ ಕುರಿಗಳನ್ನು ತರಿಸಿಕೊಂಡಳು. ಗೋಮಾತೆಯ ಸಂತಾನವೂ ವೃದ್ಧಿಸುತ್ತಿತ್ತು. ರತ್ನಾಲುವಿಗೆ ಅಪ್ಪನಿಲ್ಲ ಅನ್ನಿಸದಂತೆ ಚಿನ್ನಪಾಪಲು ಸಾಕುತ್ತಿದ್ದರಿಂದ ಅವಳ ಓದು ತಡೆಯಿಲ್ಲದೆ ಸಾಗಿತ್ತು. ಶಾಲೆಯಲ್ಲಿ ನಡೆದ ಆಶುಭಾಷಣ ಸ್ಪರ್ಧೆಯಲ್ಲಿ ಪೊಲೀಸ್ ಆಗುತ್ತೇನೆಂದು ಭಾಷಣ ಮಾಡಿದಳು. ಈಗ ಶಾಲೆಯಲ್ಲಿ ಮತ್ತು ಊರಿನಲ್ಲಿ ಅವಳನ್ನು ಪೊಲೀಸ್ ರತ್ನಾಲು ಎಂದು ಕರೆಯುತ್ತಿದ್ದರು.

ಮುಂಜಾನೆಗೆದ್ದು ಹೊಲಕ್ಕೆ ಹೋಗಿ ಬೊಗಸೆಯಲ್ಲಿ ಮಣ್ಣು ತುಂಬಿ ತಲೆ ಮೇಲೆ ಸುರಿದು ಕೊಂಡು ನಿಂತ ಚಿನ್ನಪಾಪಲು, ಹೊಲ ತನ್ನ ಕೈಗೆ ಬಂದ ರೀತಿಯನ್ನ ನೆನೆಯುತ್ತಾ ಕುಳಿತಳು. ಸೇಕರಿ ಒಂದು ಎಕರೆ ಎಂಟು ಗುಂಟೆಯ ಈ ಹೊಲವನ್ನು ತಿಮ್ಮಿರೆಡ್ಡಿಗೆ ಭೋಗ್ಯಕ್ಕೆ ಹಾಕಿದ್ದ. ಕುರಿಗಳನ್ನು ಮಾರಿ ಹೊಲವನ್ನು